# ಸ್ವಾಮಿ ಬೋಧಾತ್ಮಾನಂದ (೧೯೦೦-೧೯೭೮)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ**

ಅನುವಾದ: **ಕುಮಾರಿ ಪಿ. ಉಷಾ**

## ಭಾಗ-೨

''ಮಹಾರಾಜ್, ಠಾಕೂರರನ್ನು ಪಡೆಯುವ ಬಗೆ ಹೇಗೆ'' ಎಂದು ನಾನೊಮ್ಮೆ ಭವ ಮಹಾರಾಜರನ್ನು ಕೇಳಿದೆ. ಅದಕ್ಕವರು ಶ್ರೀ 'ಮ'-ರಿಂದ ಕೇಳಿದ್ದ ಒಂದು ಕತೆಯನ್ನು ಹೇಳಿದರು: ''ಹೊಸದಾಗಿ ಮದುವೆಯಾದ ಹುಡುಗಿಗೆ ಮಾವನ ಮನೆಗೆ ಹೋಗಲು ಇಷ್ಟವಾಗುವುದಿಲ್ಲ, ಏಕೆಂದರೆ ೧೮-೨೦ ವರ್ಷಗಳನ್ನು ತಂದೆ-ತಾಯಿಯವರೊಂದಿಗೆ ಕಳೆದ ಅವಳಿಗೆ ಅಲ್ಲಿ ಎಲ್ಲರೂ ಅಪರಿಚಿತರು, ಜಾಗವೂ ಹೊಸದು. ಮೊದಲ ಬಾರಿಗೇ ಹುಡುಗಿಗೆ ತನ್ನ ಪತಿಯ ಮೇಲೆ ಆಕರ್ಷಣೆಯುಂಟಾಗುವುದೆ? ತಾನು ಪತಿಗೃಹಕ್ಕೆ ಹೋಗುವುದಿಲ್ಲವೆಂದು ಅದೆಷ್ಟು ಹಟ, ಅದೆಷ್ಟು ಅತ್ತು ಕರೆದಾಟ! ತಾಯಿಯನ್ನು ಬಿಗಿದಪ್ಪಿಕೊಂಡು ಅತ್ತಾಗ ಆಕೆ ಹೇಳುತ್ತಾಳೆ, 'ನೋಡಮ್ಮ, ಅವನು ನಿನ್ನ ಗಂಡ, ಅವನ ಮನೆಯೇ ನಿನ್ನ ಮನೆ, ನೀನು ಅಲ್ಲಿಯೇ ನಿನ್ನ ಜೀವನವನ್ನು ಕಳೆಯಬೇಕು; ಅಲ್ಲೆ ಸಂಸಾರ ಮಾಡಬೇಕು!' ಮತ್ತೆ ಹುಡುಗಿ ತನ್ನ ತಂದೆಯನ್ನು ಆಲಂಗಿಸಿ ಕಣ್ಣೀರಿಟ್ಟಾಗ, ಆತನೂ ಅವಳನ್ನು ಸಂತೈಸುತ್ತ, 'ನಿನ್ನ ವಿವಾಹಿತ ಜೀವನವೆಲ್ಲ ಅವನೊಂದಿಗೆ ಕಳೆಯಬೇಕು. ಯಾವುದೇ ಹುಡುಗಿ ಜೀವನವೆಲ್ಲ ತನ್ನ ತವರಿನಲ್ಲೆ ಕಳೆಯುವಳೇನು? ನೀನು ಇಲ್ಲಿಗೆ ಆಗಾಗ ಬರುವಿಯಂತೆ. ನಾವೂ ನಿನ್ನನ್ನು ನೋಡಲು ಬರುತ್ತೇವೆ' ಎನ್ನುತ್ತಾನೆ.

''ಹೀಗೆ ಹುಡುಗಿ ಮಾವನ ಮನೆಗೆ ಹೋಗುತ್ತಾಳೆ. ಒಂದೆರಡು ಮಕ್ಕಳೂ ಆಗುತ್ತವೆ. ಅನೇಕ ದಿನಗಳಾದರೂ ಆಕೆ ತವರಿಗೆ ಬಾರದಿದ್ದಾಗ ಅವಳ ತಂದೆ ಪತ್ರ ಬರೆದರು, 'ನಿನ್ನ ತಾಯಿಗೆ ನಿನ್ನನ್ನು ನೋಡಬೇಕೆಂಬ ಆಸೆ. ತುಂಬಾ ದಿನಗಳಿಂದ ನೀನಿಲ್ಲಿಗೆ ಬಂದಿಲ್ಲ. ಒಮ್ಮೆ ಬಂದು ಆಕೆಯನ್ನು ನೋಡಿ ಹೋಗು' ಎಂದು. ಮಗಳ ಉತ್ತರವೂ ಬಂತು - 'ಈಗ ನಾನು ಅಲ್ಲಿಗೆ ಹೇಗೆ ತಾನೆ ಹೋಗಲಿ? ನನ್ನ ಮಗಳ ಆರೋಗ್ಯ ಚೆನ್ನಾಗಿಲ್ಲ. ಸದ್ಯದಲ್ಲಿ ಮಗನಿಗೆ ಪರೀಕ್ಷೆ, ಅದಲ್ಲದೆ ನಾನು ಅಲ್ಲಿಗೆ ಬಂದರೆ ನಿಮ್ಮ ಅಳಿಯ ಆಫೀಸಿಗೆ ಹೋಗುವಾಗ ಯಾರು ತಾನೆ ಅಡಿಗೆ ಮಾಡುತ್ತಾರೆ?' ಹೀಗೆಲ್ಲ ನೆಪ ಹೇಳುತ್ತಾಳೆ. ಅದೇ ರೀತಿ ಭಗವಂತನೊಂದಿಗೆ 'ಆತನೆ ನಿನ್ನ ಪತಿ, ಆ ಮನೆಯೆ ನಿನ್ನ ಮನೆ' ಎಂಬ ಸಂಬಂಧವನ್ನು ಬೆಳೆಸಿಕೊಂಡರೆ ಮತ್ತೆ ಈ ಸಂಸಾರವು ನಿನ್ನನ್ನು ಹಿಂದಕ್ಕೆಳೆಯಲಾರದು.''


ಭವಮಹಾರಾಜರು ಶ್ರೀ 'ಮ' ಅವರಿಂದ ಕೇಳಿದ್ದ ಇನ್ನೊಂದು ಕತೆಯನ್ನು ನನಗೆ ಹೇಳಿದ್ದರು. ಮಾಸ್ಟರ್ ಮಹಾಶಯರ (ಇವರೇ 'ಮ') ಬಳಿ ಪ್ರತಿದಿನವೂ ಅನೇಕ ಭಕ್ತರು ಸತ್ಸಂಗ ಮಾಡಲು ಬರುತ್ತಿದ್ದರು. ಒಂದು ದಿನ ಒಬ್ಬರು ಹೇಳಿದರು : ''ಸಂಸಾರದಲ್ಲಿ ಎಷ್ಟೊಂದು ದುಃಖ, ಕಷ್ಟಗಳು!'' ಶ್ರೀ 'ಮ' ಅವರು ಹೇಳಿದ್ದನ್ನೆಲ್ಲ ಕಿವಿಗೊಟ್ಟು ಕೇಳಿದರು. ನಂತರ ಅವರ ಮಾತುಗಳನ್ನು ಪರೀಕ್ಷೆ ಮಾಡುವಂತೆ ಹೇಳಿದರು, ''ಅವರು ಹೇಳಿದ್ದನ್ನು ನೀವೆಲ್ಲ ಕೇಳಿದಿರಲ್ಲವೆ-'ಸಂಸಾರದಲ್ಲಿ ಬಹು ದುಃಖಕಷ್ಟಗಳು' '' ನಂತರ ಹೇಳತೊಡಗಿದರು, ''ರಾತ್ರಿಯೆಲ್ಲ ಬಾಟಲ್‌ನ ಮೇಲೆ ಬಾಟಲ್ ಮದ್ಯಪಾನ ಮಾಡಿದರೆ ಮತ್ತು ಬರುವುದಿಲ್ಲವೆ? ಕಾಲುಗಳು ಸಮತೋಲನವನ್ನು ಕಳೆದುಕೊಳ್ಳುವುದಿಲ್ಲವೆ? ಮದ್ಯಪಾನ ಮಾಡಿದರೆ ಮತ್ತರಾಗದಿರಲು ಸಾಧ್ಯವೆ? ಸಂಸಾರವೆಂಬ ಮದ್ಯ ವನ್ನು ಕುಡಿದಿರುವಿರಿ, ದುಃಖ ಕಷ್ಟಗಳು ಏಕೆ ಬರುವುದಿಲ್ಲ?''

ನಾನೊಂದು ದಿನ ಕೇಳಿದೆ, ''ನಿಮ್ಮ ಧ್ಯಾನ, ಜಪದ ರಹಸ್ಯವೇನು ನನಗೆ ಸ್ವಲ್ಪ ಹೇಳುವಿರಾ?'' ಅವರೆಂದರು, ''ನೋಡು, ಸಂಜೆ ಜಪಕ್ಕೆ ಕುಳಿತುಕೊಳ್ಳುವ ಮುನ್ನ ನಾನು 'ವಿವೇಕ ಚೂಡಾಮಣಿ'ಯ ನಾಲ್ಕು ಶ್ಲೋಕಗಳನ್ನು ಓದಿ ಇವುಗಳಿಂದ ನಾನು ದಿನವೆಲ್ಲ ಮಾಡಿದ ಕಾರ್ಯಕಲಾಪಗಳು ಹಾಗೂ ಚಿಂತನೆಗಳನ್ನು ಅಳಿಸಿಬಿಡುತ್ತೇನೆ. ವಿಚಾರದ ಮೂಲಕ ಮನಸ್ಸನ್ನು ಮಾಯೆಯಿಂದ ಮುಕ್ತಗೊಳಿಸಿ ಧ್ಯಾನಜಪಗಳನ್ನು ಪ್ರಾರಂಭಿಸುತ್ತೇನೆ. ಸಂಸಾರ, ಪ್ರಪಂಚ - ಇವುಗಳು ಅನಿತ್ಯವಾದ್ದರಿಂದ ಇವುಗಳಿಗೆ ಸಂಬಂಧಿಸಿದ ಸಮಸ್ಯೆಗಳೂ ಅನಿತ್ಯವೇ. ಅನಿತ್ಯವಾದ ದುಶ್ಚಿಂತೆ -ದುರ್ಭಾವನೆಗಳನ್ನು ಮನಸ್ಸಿನಿಂದ ದೂರಮಾಡಿದರೆ ಮನಸ್ಸು ತಾನಾಗಿಯೇ ಶಾಂತವಾಗುತ್ತದೆ.''

ಅವರು ನನಗೆ ಅನೇಕ ಸಲ ಮನಸ್ಸಿನ ಸಂಯಮದ ಬಗ್ಗೆ ಉಪಯುಕ್ತವಾದ 'ಪಾತಂಜಲ ಯೋಗದರ್ಶನ'ದ ಸಮಾಧಿ ಪಾದದ ೧೨ನೆಯ ಸೂತ್ರ- **'ಅಭ್ಯಾಸವೈರಾಗ್ಯಾಭ್ಯಾಂ ತನ್ನಿರೋಧಃ'** ಬಗ್ಗೆ ಹೇಳಿದ್ದಾರೆ ಈ ಸೂತ್ರದ ವ್ಯಾಸಭಾಷ್ಯ ಹೀಗಿದೆ; 'ವೈರಾಗ್ಯೇಣ ವಿಷಯಸ್ರೋತಃ ಖಿಲೀಕ್ರಿಯತೇ, ವಿವೇಕ ದರ್ಶನಾಭ್ಯಾಸೇನ ವಿವೇಕಸ್ರೋತಃ ಉದ್ಘಾಟ್ಯತೇ' ವೈರಾಗ್ಯದಿಂದ ವಿಷಯ ಸ್ರೋತವು ತೆರೆಯಲ್ಪಡುತ್ತದೆ. ವ್ಯಾಸಭಾಷ್ಯದ 'ವಿವೇಕ' ಹಾಗೂ 'ವೈರಾಗ್ಯ' - ಈ ಎರಡು ಶಬ್ದಗಳನ್ನು ನನಗೆ ಅವರು ಅನೇಕ ಬಾರಿ ಹೇಳಿದ್ದಾರೆ.

ಟ್ರೇನಿಂಗ್ ಸೆಂಟರಿನಲ್ಲಿ ನಾನು ಭವ ಮಹಾರಾಜ್ ಹಾಗೂ ಪಂಡಿತ ಮಹಾರಾಜ್ (ಬ್ರಹ್ಮಚಾರಿ ಮೇಧಾಚೈತನ್ಯ)ರ ಕ್ಲಾಸು

ಗಳಿಗೆ ಮಾತ್ರವೇ ಹೋಗುತ್ತಿದ್ದೆ. ನನಗೆ ರಿಯಾಯಿತಿ ಸಿಕ್ಕಿದ್ದ ರಿಂದ ಇತರ ವಿಷಯಗಳ ತರಗತಿಗಳಿಗೆ ಹೋಗದೆ ಬರಿಯ ಪರೀಕ್ಷೆ ಯನ್ನು ಮಾತ್ರ ಬರೆಯಬೇಕಾ ಗಿತ್ತು. ಭವ ಮಹಾರಾಜ್ ನನಗೆ, ''ನೀನು ಈಶ, ಕೇನ, ಕಠ, ಮುಂಡಕ ಉಪನಿಷತ್ತುಗಳನ್ನು ಶಾಂಕರಭಾಷ್ಯ, ಆನಂದಗಿರಿ ಯವರ ಟಿಪ್ಪಣಿ ಹಾಗೂ ಶಂಕರಾನಂದರ ದೀಪಿಕೆಗಳೊಂ ದಿಗೆ ನಿನ್ನ ಕೋಣೆಯಲ್ಲೇ ಓದು,'' ಎಂದಿದ್ದರು. ಅದಲ್ಲದೆ ಅವರು ನನಗೂ ರತಿನ್ ಮಹಾರಾಜ ರಿಗೂ (ಸ್ವಾಮಿ ಜ್ಯೋತಿರೂಪಾನಂದ) ಪ್ರತಿ ಮಂಗಳವಾರ ಹಾಗೂ ಶುಕ್ರವಾರದಂದು ಒಂದು ಗಂಟೆಯ ಕಾಲ 'ವಿವೇಕ ಚೂಡಾಮಣಿ' ಹಾಗೂ ಮಾಂಡೂಕ್ಯ ಉಪನಿಷತ್ ಕಾರಿಕಾ ಸಮೇತವಾಗಿ ಹೇಳಿಕೊಡುತ್ತಿದ್ದರು. ರಾತ್ರಿ ಭೋಜನದ ಬಳಿಕ ರತಿನ್ ಮಹಾರಾಜರು ಮತ್ತು ನಾನು ಪಂಡಿತ ಮಹಾರಾಜ ರಿಂದ 'ನ್ಯಾಯ' ಹಾಗೂ 'ಮೀಮಾಂಸೆ' ಕಲಿಯುತ್ತಿದ್ದೆವು. ಇವು ಗಳು ನಮ್ಮ ಪಠ್ಯದಲ್ಲಿರಲಿಲ್ಲ. ಭವ ಮಹಾರಾಜರು ನಮಗೆ 'ವೇದಾಂತಸಾರ' ಹಾಗು 'ಸಾಂಖ್ಯಕಾರಿಕಾ' ಹೇಳಿಕೊಟ್ಟಿದ್ದರು. ನಾನು 'ವೇದಾಂತಸಾರ'ದ ನೋಟ್ಸ್ ಮಾಡಿಕೊಳ್ಳುತ್ತಿದ್ದೆ. ಅವರು ಅದನ್ನೋದಿ ಅದನ್ನು ತಾವೇ ತಿದ್ದಿಕೊಡುತ್ತಿದ್ದರು. ಆ ಪುಸ್ತಕ ಇಂದಿಗೂ ನನ್ನ ಬಳಿ ಇದೆ. ಭವ ಮಹಾರಾಜರಂತೆ ಶಾಸ್ತ್ರವನ್ನು ಕಲಿಸುವ ಅಧ್ಯಾಪಕರು ವಿರಳ. ಅವರು ಕೇವಲ ಶಾಸ್ತ್ರಜ್ಞ ಪಂಡಿತರಾಗಿರದೆ, ಸಾಧಕ ಸಾಧುಗಳೂ ಆಗಿದ್ದರು. ಶಾಸ್ತ್ರಗಳನ್ನು ಕಲಿಸುವಾಗ ಅದರ ಪ್ರಾಯೋಗಿಕತೆಯನ್ನೂ ಶ್ರೀರಾಮಕೃಷ್ಣ ಮತ್ತು ಅವರ ಪಾರ್ಷದರು ತಮ್ಮ ಜೀವನದಲ್ಲಿ ಶಾಸ್ತ್ರವಾಕ್ಯಗಳನ್ನು ಹೇಗೆ ಪ್ರತಿಬಿಂಬಿಸುತ್ತಿದ್ದರೆಂದೂ ತೋರಿಸಿ ಕೊಡುತ್ತಿದ್ದರು. ಅದೆಷ್ಟು ಪ್ರೀತಿಯಿಂದ ಅವರು ಕಲಿಸುತ್ತಿದ್ದರು! ಪಠ್ಯವಸ್ತುವನ್ನು ತಮ್ಮ ವಿದ್ಯಾರ್ಥಿಗಳ ಮನದಲ್ಲಿ ಹೇಗೆ ತುಂಬ ಬೇಕೆಂಬ ಕೌಶಲವನ್ನೂ ಅವರು ಅರಿತವರಾಗಿದ್ದರು.


ಬ್ರಹ್ಮಚಾರಿಗಳೊಂದಿಗೆ ಸ್ವಾಮಿ ಬೋಧಾತ್ಮನಂದರು (ಲೇಖಕರು ಸ್ವಾಮೀಜಿ ಹಿಂದೆ, ಎಡಭಾಗದಲ್ಲಿ)

ಅವರಿಗೆ ಮಧುಮೇಹ ಮತ್ತು ಅಧಿಕ ರಕ್ತದೊತ್ತಡವಿತ್ತು. ಒಂದು ದಿನ ಅವರು ಅಸ್ವಸ್ಥರಾಗಿದ್ದರೂ, ತರಗತಿಗೆ ಮುಂಚೆ 'ವೇದಾಂತಸಾರ' ಓದುತ್ತಿದ್ದರು. ನಾನು ಅವರು ತೊಟ್ಟಿದ್ದ ಕನ್ನಡಕ ವನ್ನು ತೆಗೆದಿರಿಸಿ, ''ನೀವು ೪೦ ವರ್ಷಗಳಿಂದ ವೇದಾಂತವನ್ನು ಓದಿ ಅದನ್ನು ಕಲಿಸುತ್ತಿದ್ದೀರಿ. ಈಗಲೂ ಕ್ಲಾಸ್‌ಗಾಗಿ ತಯಾರಿ ಮಾಡಿಕೊಳ್ಳುವ ಅಗತ್ಯವೇನಿದೆ?'' ಎಂದಾಗ ಅವರು ಹೇಳಿ ದರು, ''ನೀನು ನನ್ನ ಕನ್ನಡಕವನ್ನು ಹಿಂದಿರುಗಿಸು. ನೋಡು, ನಿನಗೊಂದು ಮಾತನ್ನು ಹೇಳುತ್ತೇನೆ. ನನಗೆ ಶಾಸ್ತ್ರದ ಶಬ್ದಾರ್ಥ ತಿಳಿದಿದೆ. ಆದರೆ ಕ್ಲಾಸಿಗೆ ಮುಂಚೆ ಆ ವಿಷಯದ ಬಗ್ಗೆ ಮನನ ಹಾಗೂ ಧ್ಯಾನ ಮಾಡಿದರೆ ಅನೇಕ ಹೊಸ ವಿಷಯಗಳು ಗೋಚ ರಿಸುತ್ತವೆ. ಇವುಗಳ ಬಗ್ಗೆ ಚಿಂತಿಸುತ್ತ ಕ್ಲಾಸಿನೊಳಗೆ ಪ್ರವೇಶಿಸು ತ್ತೇನೆ. ಈ ಹೊಸ ಭಾವ ಹಾಗೂ ಹೊಸ ಬೆಳಕು ನನಗೆ ಮತ್ತು ವಿದ್ಯಾರ್ಥಿಗಳಿಗೆ ಸ್ಫೂರ್ತಿಯನ್ನು ನೀಡುತ್ತವೆ. ಶಿಕ್ಷಕನಿಗೆ ಆಳ ವಾದ ಜ್ಞಾನವಿರಬೇಕು. ಮೇಲ್ಮೇಲಿನ ಜ್ಞಾನವಾದರೆ ವಿದ್ಯಾರ್ಥಿ ಗಳೆದುರು ಶಿಕ್ಷಕನ ದೈನ್ಯತೆ ಪ್ರಕಟಗೊಳ್ಳುತ್ತದೆ. ಭವಿಷ್ಯತ್ತಿನಲ್ಲಿ ನೀನೆಂದೂ ತಯಾರಿಕೆಯಿಲ್ಲದೆ ಭಾಷಣವನ್ನಾಗಲಿ, ತರಗತಿಯ ನ್ನಾಗಲಿ ಮಾಡಬೇಡ'' ಎಂದರು. ಮಹಾರಾಜರು ನೀಡಿದ ಈ ಅಮೂಲ್ಯ ಉಪದೇಶವನ್ನು ನಾನು ಈಗಲೂ ಪಾಲಿಸುತ್ತೇನೆ.

ಒಂದು ದಿನ ಉಪನಿಷತ್ ಕ್ಲಾಸಿನಲ್ಲಿ ಪಂಡಿತ ಮಹಾ ರಾಜರು, ''ಭವ ಮಹಾರಾಜರು ಶಾಸ್ತ್ರಗಳನ್ನರಿತ ತಪಸ್ವಿ ಸಾಧು ಗಳು. ಅವರು ಖಂಡಿತವಾಗಿಯೂ ಬ್ರಹ್ಮಲೋಕಕ್ಕೆ ಹೋಗು ವರು'' ಎಂದರು. ನಾನು ಭವ ಮಹಾರಾಜರಿಗೆ, ''ಮಹಾ ರಾಜ್, ನೀವಿನ್ನು ಜಪ-ಧ್ಯಾನಗಳನ್ನು ಮಾಡಬೇಕಾಗಿಲ್ಲ. ನೀವು ಬ್ರಹ್ಮಲೋಕಕ್ಕೆ ಹೋಗುವಿರೆಂದು ಪಂಡಿತ ಮಹಾರಾಜರು ಹೇಳಿದ್ದಾರೆ'' ಎಂದಾಗ ಅವರು ನಗುತ್ತ ''ಪಂಡಿತರು ಹೀಗೆ ಹೇಳಿದ್ದಾರೇನು? ಸರಿ ಹಾಗಾದರೆ. ಅವನ ಹತ್ತಿರ ಹೋಗಿ ನಾನು ಯಮಲೋಕಕ್ಕೆ ಹೋಗುವೆನೆಂದು ಹೇಳು'' ಎಂದರು!

ಒಂದು ದಿನ ವೇದಾಂತದ ಕ್ಲಾಸಿನಲ್ಲಿ 'ಮುಕ್ತಿ' ಹಾಗು ಬುದ್ಧರ 'ನಿರ್ವಾಣ'ಗಳ ನಡುವೆ ವ್ಯತ್ಯಾಸವಿದೆಯೇ ಎಂಬುದರ ಬಗ್ಗೆ ಘೋರ ವಾಗ್ವಿವಾದ ನಡೆಯಿತು. ಭವ ಮಹಾರಾಜರು ಒಂದು ಉದಾಹರಣೆಯ ಮೂಲಕ ಇದಕ್ಕೆ ಮುಕ್ತಾಯ ಹೇಳಿ ದರು. ಅವರೆಂದರು. ''ದೊಡ್ಡ ಹಡಗೊಂದು ಸಮುದ್ರ ದಾಟಲು ಹೊರಟಿತು. ಶಂಕರ ಹಾಗು ಬುದ್ಧ ಈ ಹಡಗಿನ ಇಬ್ಬರು ಪಯಣಿಗರು. ಹಡಗು ಸಮುದ್ರದ ತೀರದಿಂದ ಬಹು ದೂರ, ಅಂದರೆ ಆಳವಾದ ಸಮುದ್ರವನ್ನು ತಲುಪಿದಾಗ ಬುದ್ಧ ಆಕಾಶದೆಡೆ ನೋಡುತ್ತ 'ಸರ್ವಂ ಶೂನ್ಯಂ, ಶೂನ್ಯಮ್' ಎಂದ.

ಶಂಕರರು ಸಮುದ್ರವನ್ನು ನೋಡುತ್ತ 'ಸರ್ವಂ ಪೂರ್ಣಂ, ಪೂರ್ಣಮ್' ಎಂದರು. ಇಬ್ಬರೂ ಒಂದೇ ಕೇಂದ್ರದಲ್ಲಿ ನಿಂತು ಒಂದೇ ಅಭಿಪ್ರಾಯವನ್ನು ಎರಡು ಬಗೆಯಲ್ಲಿ ಪ್ರಕಾಶಿಸಿದರು. ಬುದ್ಧನು ನಿರ್ವಾಣವನ್ನು ಶೂನ್ಯರೂಪದಲ್ಲಿ ಕಂಡರೆ ಶಂಕರರು ಮುಕ್ತಿಯನ್ನು ಪೂರ್ಣರೂಪದಲ್ಲಿ ಕಂಡರು. ಬುದ್ಧ ನಕಾರಾತ್ಮಕ ಪಾರ್ಶ್ವವನ್ನು ಕಂಡರೆ, ಶಂಕರರು ಕಂಡದ್ದು ಸಕಾರಾತ್ಮಕ ಪಾರ್ಶ್ವವನ್ನು. ಅರ್ಧ ತುಂಬಿದ ಲೋಟವನ್ನು ಕೆಲವರು 'ಅರ್ಧ ಬರಿದು' ಎಂದೂ, ಕೆಲವರು 'ಅರ್ಧ ತುಂಬಿದೆ' ಎಂದೂ ಅಭಿಪ್ರಾಯ ಪಡುತ್ತಾರೆ. ನೀವು ಜೀವನದಲ್ಲಿ ಸದಾ ಸಕಾರಾತ್ಮಕತೆಯನ್ನು ನೋಡಲು ಪ್ರಯತ್ನಿಸಿ'' ಹೀಗೆ ಅವರು ತರ್ಕಕ್ಕೆ ಸೊಗಸಾಗಿ ಯುಕ್ತಿಸಮ್ಮತ ಸಮಾಧಾನವನ್ನು ನೀಡಿದ್ದರು.

ಭವ ಮಹಾರಾಜರು ಗಂಭೀರಸ್ವಭಾವದ ಸಾಧುಗಳಾಗಿದ್ದರೂ ಒಣ ಪಂಡಿತ ಸಾಧುಗಳಾಗಿರಲಿಲ್ಲ. ಅವರು 'ತುಪ್ಪದಲ್ಲಿ ಕರಿದು ಸಕ್ಕರೆ ಪಾಕದಲ್ಲಿ ಮುಳುಗಿದ' ಸಾಧುಗಳಾಗಿದ್ದರು. ನನಗೊಂದು ದಿನ ಅವರು ಹೀಗೆ ಹೇಳಿದರು : ''ನೋಡು ಸಾಧುಗಳು ವೈರಾಗ್ಯಭರಿತ 'ಯೋಗವಾಸಿಷ್ಠ' ರಾಮಾಯಣವನ್ನು ಓದಲಿಚ್ಛಿಸುತ್ತಾರೆ. ಅದರ ಅಂತಿಮ ತತ್ತ್ವ ಹೀಗಿದೆ: ವಸಿಷ್ಠರು ರಾಮಚಂದ್ರನಿಗೆ ಹೇಳುತ್ತಾರೆ – 'ಹೇ ರಾಮ, ನೀನು ವಿವಾಹವಾಗಿ ಸಂಸಾರದಲ್ಲಿ ತೊಡಗು.' ಗೃಹಸ್ಥರು ಭಕ್ತಿಯಿಂದ ಪರಿಪೂರ್ಣವಾದ ಭಾಗವತವನ್ನು ಓದಲು ಇಷ್ಟಪಡುವರು. ಇದರ ಅಂತಿಮ ತತ್ತ್ವ: ಶ್ರೀಕೃಷ್ಣನು ಉದ್ಧವನಿಗೆ ಹೇಳುತ್ತಾನೆ, 'ಹೇ ಉದ್ಧವ, ನೀನು ಸಂಸಾರವನ್ನು ತ್ಯಜಿಸಿ ಬದರಿಕಾಶ್ರಮಕ್ಕೆ ಹೋಗಿ ಅಲ್ಲಿ ತಪಸ್ಸಿನಲ್ಲಿ ತೊಡಗು.' ''

ಟ್ರೇನಿಂಗ್ ಸೆಂಟರಿನಲ್ಲಿದ್ದಾಗ ಸಂಜೆ ಕ್ಲಾಸಿನ ನಂತರ ನಾವು ಹೂತೋಟದ ಕೆಲಸ ಮಾಡಬೇಕಾಗುತ್ತಿತ್ತು. ನೀರಿನ ನಲ್ಲಿಯ ಹತ್ತಿರದ ಜಾಗದಲ್ಲಿ ಹೂವಿನ ಗಿಡಗಳನ್ನು ನೆಡುವ ಕೆಲಸವನ್ನು ನನಗೊಪ್ಪಿಸಿದರು. ಅದಕ್ಕಾಗಿ ನಾನು ಮಣ್ಣನ್ನು ಚೆನ್ನಾಗಿ ಅಗೆದು ತಯಾರು ಮಾಡಿದ್ದೆ. ಬ್ರಹ್ಮಚಾರಿ ಸುನಿಲ್ ಶಿಲಾಂಗ್ ಆಶ್ರಮದಿಂದ ಒಳ್ಳೆಯ ಚೆಂಡುಹೂವಿನ ಸಸಿಗಳನ್ನು ತರಿಸಿದ್ದ. ನಾನು ಸುಮಾರು ೩೦-೪೦ ಚೆಂಡುಹೂವಿನ ಸಸಿಗಳನ್ನು ನೆಟ್ಟು ನೀರು ಹಾಕಿದೆ. ಮರುದಿನ ನೋಡಿದರೆ ಕೆಲವು ಅಳಿಲುಗಳು ನನ್ನ ಪುಷ್ಟವಾದ ಸಸಿಗಳನ್ನು ಮುಗಿಸಿಬಿಟ್ಟಿದ್ದವು. ನನಗೆ ಬೇಸರವಾಯಿತು. ಚೆಂಡು ಹೂವುಗಳ ದೊಡ್ಡ ಹಾರವನ್ನು ಕಟ್ಟಿ ಠಾಕೂರರಿಗೆ ಅರ್ಪಿಸೋಣವೆಂದುಕೊಂಡಿದ್ದೆ. ಸಂಜೆ ನಾನು ತೋಟದಲ್ಲಿದ್ದಾಗ ಭವ ಮಹಾರಾಜರು ತಿರುಗಾಡುತ್ತ ಅಲ್ಲಿಗೆ ಬಂದಾಗ ತನ್ನ ಮನಸ್ಸಿನ ಖೇದವನ್ನು ಅವರಲ್ಲಿ ತೋಡಿಕೊಂಡೆ. ಅವರು ವೇದಾಂತ ಉಪದೇಶದ ಮೂಲಕ ನನಗೆ ಸಾಂತ್ವನವನ್ನು ನೀಡಿದರು.

ಅವರೆಂದರು: ''ಒಂದು ಸುಂದರವಾದ ಮನೆ. ಅದರ ಗೋಡೆಗಳಲ್ಲಿ ಕನ್ನಡಿಗಳು. ನಾಯಿಯೊಂದು ಆ ಮನೆಯೊಳಗೆ ನುಗ್ಗಿತು. ನಾಯಿ ಆಶ್ಚರ್ಯದಿಂದ ಎಲ್ಲೆಡೆಯೂ ತನ್ನ ಪ್ರತಿಬಿಂಬವನ್ನು ನೋಡಿ, ಅದನ್ನು ತನ್ನ ಪ್ರತಿಸ್ಪರ್ಧಿ ಎಂದುಕೊಂಡು ಬೊಗಳಲಾರಂಬಿಸಿತು. ಎಲ್ಲಿ ನೋಡಿದರಲ್ಲಿ ನಾಯಿ ಬೊಗಳುತ್ತಿರುವುದನ್ನು ನೋಡಿದಾಗ ಅದು ಮತ್ತಷ್ಟು ಜೋರಾಗಿ ಬೊಗಳಿತು. ನಿನ್ನ ಅವಸ್ಥೆಯೂ ಆ ನಾಯಿಯಂತೆಯೆ ಸರಿ. ಸ್ವಲ್ಪ ಮುಂಚೆ 'ಸರ್ವಂ ಖಲ್ವಿದಂ ಬ್ರಹ್ಮ' ಎಂದಿದ್ದೆ. ಈಗ ಆ ಅಳಿಲುಗಳ ಮೇಲೆ ಕೋಪಗೊಂಡು ನಷ್ಟವಾಗಿ ಹೋದ ಆ ಚೆಂಡು ಹೂವಿನ ಗಿಡಗಳಿಗಾಗಿ ಕೂಗಾಡುತ್ತಿರುವೆ. ಇದೇ ನಿನ್ನ ವೇದಾಂತದ ಅಧ್ಯಯನವೇನು?'' ನಾನೆಂದೆ, ''ಈ ವೇದಾಂತ! ಬಹಳ ಕಠಿಣ ವೇದಾಂತ!''

ಇನ್ನೊಂದು ದಿನ ಭವ ಮಹಾರಾಜರು ತಿರುಗಾಡಲು ಹೊರಟಿದ್ದಾಗ ನಾನು ತೋಟದಲ್ಲಿ ಕೆಲಸಮಾಡುತ್ತಿದ್ದೆ. 'ಅಲ್ಪ ವಿದ್ಯೆ ಭಯಂಕರವಾದುದು' ಎಂಬ ಮಾತಿದೆ. ನಾನು ಅವರಿಗೆ ಕೇಳಿಸುವಂತೆ 'ಆಚಾರ್ಯವಾನ್ ಪುರುಷೋ ವೇದ' ಅರ್ಥಾತ್ ಆಚಾರ್ಯನು ಬ್ರಹ್ಮವನ್ನು ತಿಳಿದಿರುವನು *(ಛಾಂದೋಗ್ಯ ಉಪನಿಷತ್ತು)* ಎಂದೆ. ನನ್ನ ಮಾತು ಅವರ ಕಿವಿಗೆ ಬೀಳುತ್ತಲೇ ಅವರು ಹಳೆಯ ಟ್ರೇನಿಂಗ್ ಸೆಂಟರ್‌ನ ಮೂಲೆಯ ರಸ್ತೆಯಲ್ಲಿ ನಿಂತು ಕೇಳಿದರು, ''ನೀನು ಏನೆಂದೆ? 'ಆಚಾರ್ಯವಾನ್ ಪುರುಷೋ ವೇದ'– ಅವರು ಏನನ್ನು ತಿಳಿದಿದ್ದಾರೆ? ಬ್ರಹ್ಮವನ್ನು ತಿಳಿದಿದ್ದಾರೆ. ಹಾಗಾದರೆ ನೀನು ಬ್ರಹ್ಮಜ್ಞ. ಆ ಬ್ರಹ್ಮನೆಲ್ಲಿರುವನು? ಸ ಏವ ಅಧಸ್ತಾತ್, ಸ ಉಪರಿಷ್ಟಾತ್, ಸ ಪುರಸ್ತಾತ್, ಸ ದಕ್ಷಿಣತಃ, ಸ ಉತ್ತರತಃ, ಸ ಏವೇದಂ ಸರ್ವಂ – ಆತನ ಉಪಸ್ಥಿತಿಯನ್ನು ಕೆಳಗೆ, ಮೇಲೆ, ಹಿಂದೆ, ಮುಂದೆ, ಎದುರು, ಎಡಕ್ಕೆ, ಬಲಕ್ಕೆ– ಎಲ್ಲೆಡೆಯೂ ಕಾಣಬಹುದು. ಇರುವುದೆಲ್ಲವೂ ಆತನೆ. ಅಂತಹ ಬ್ರಹ್ಮಜ್ಞನಿಗೆ ನಾನು ನಮಸ್ಕರಿಸುತ್ತೇನೆ'' ಎನ್ನುತ್ತ ಅವರು ಪ್ರದಕ್ಷಿಣೆ ಮಾಡುತ್ತ ಚತುರ್ದಿಕ್ಕಿನಲ್ಲೂ ನಮಸ್ಕಾರ ಮಾಡಲಾರಂಭಿಸಿದರು. ನಾನು ಬಹಳ ಕಸಿವಿಸಿಗೊಂಡೆ. ಅವರು ಸಾಮಾನ್ಯ ವಿಷಯ ಅಥವಾ ಘಟನೆಯನ್ನು ತತ್ತ್ವದೆಡೆಗೆ ತಿರುಗಿಸುತ್ತ ಅದು ಮನಸ್ಸಿನಲ್ಲಿ ಉಳಿಯುವಂತೆ ಮಾಡುತ್ತಿದ್ದರು.

ಒಂದು ದಿನ ರಾತ್ರಿ ಭೋಜನವನ್ನು ಬಡಿಸಿ ಬಳಿಕ ಎರಡನೆಯ ಪಂಕ್ತಿಯಲ್ಲಿ ಊಟ ಮಾಡಿ ನನ್ನ ಕೋಣೆಗೆ ಬಂದಾಗ ಭವ ಮಹಾರಾಜರು ನನ್ನ ಕೋಣೆಯೆದುರು ನಿಂತಿದ್ದುದನ್ನು ಕಂಡೆ. ಅವರೆಂದರು, ''ನೋಡಪ್ಪ, ವೇದಾಂತದ ಕ್ಲಾಸಿನಲ್ಲಿ ನೀನು ಕೇಳಿದ ಪ್ರಶ್ನೆಗೆ ಆಗ ಸೂಕ್ತ ಉತ್ತರವನ್ನು ನೀಡಲಾಗಲಿಲ್ಲ. ಅದರ ಅರ್ಥ ಹೀಗಿದೆ,'' ಎನ್ನುತ್ತ ಅದರ ಬಗ್ಗೆ ಚರ್ಚಿಸಿದರು. ಅವರ ಪ್ರಾಮಾಣಿಕತೆಯನ್ನು ಕಂಡು ಚಕಿತನಾದೆ. ಶಾಸ್ತ್ರಗಳ ಬಗ್ಗೆ ಸೂಕ್ತ ಪ್ರಶ್ನೆಗಳನ್ನು ಕೇಳಿದರೆ ಅವರಿಗೆ ಬಹಳ ಆನಂದವಾಗುತ್ತಿತ್ತು.

*(ಮುಂದಿನ ಸಂಚಿಕೆಗೆ)*